# ಇದು ಚಿತ್ರಗೀತೆಗಳ ಸಮಯ

ಚಿತ್ರಗೀತೆಗಳ ಬಗ್ಗೆ ನಾನು ಭದ್ರಾವತಿಯಲ್ಲಿ ಕೂತು ಬರೆಯುವುದಕ್ಕೆ ಒಂದು ಸಮಕಾಲೀನ ಮತ್ತು ಚಾರಿತ್ರಿಕ ಮಹತ್ವವಿದೆ. ಇದು ಹೇಗೆ ಉಕ್ಕಿನ ನಗರಿಯೋ, ಕಾಗದ ನಗರಿಯೋ ಹಾಗೇ ಆರ್ಕೆಸ್ಟ್ರಾಗಳ ನಗರಿಯೂ ಕೂಡ. ಇಲ್ಲಿ ನಲವತ್ತಕ್ಕೂ ಹೆಚ್ಚು ಆರ್ಕೆಸ್ಟ್ರಾ ತಂಡಗಳಿವೆ ಎಂದು ಮೊನ್ನೆ ಯಾರೋ ಲೆಕ್ಕ ಕೊಟ್ಟರು. ಸಾವಿರ ಮಾಧ್ಯಮಗಳ ಇಂದಿನ ದಿನಮಾನದಲ್ಲೂ ಭದ್ರಾವತಿಯ ಗಾನಸುಧೆ ರಾಜ್ಯದಾದ್ಯಂತ ಹರಿಯುತ್ತಿದೆ ಎಂದಾದಲ್ಲಿ ಆ ನಾದೋತ್ಪತ್ತಿಯ ಕೇಂದ್ರ ಸ್ಥಾನವಾದ ಇಲ್ಲಿ ಚಿತ್ರಗೀತೆ ಕೇಳದೆ ಬದುಕಲಾದೀತೇ? ಆರ್ಕೆಸ್ಟ್ರಾ ಇಲ್ಲದ ಮದುವೆ ಇಲ್ಲಿ ಅಪರೂಪ. ಸಾಲದು ಎಂಬಂತೆ ನಾನು ಕೆಲಸ ಮಾಡುವ ಆಕಾಶವಾಣಿ ಕೇಂದ್ರದ ಪಕ್ಕದಲ್ಲಿ ಮದುವೆಯ ಛತ್ರವಿದೆ. ಒಂದು ಕಡೆ ಧಾರೆ ನಡೆಯುತ್ತಿದ್ದರೆ – ಇನ್ನೊಂದು ಕಡೆ ಗಾನ ಧಾರೆ. ಎರಡು ಧಾರೆಗಳ ನಡುವೆ ನಮ್ಮ ಕಡತ ಧಾರೆ. ಈ ರೇಡಿಯೊ ಫ್ಯಾಕ್ಟರಿಗೆ ನಾನು ಸೇರಿಕೊಳ್ಳುವ ಮುಂಚೆ... ಹ್ಞಾ... ಅವಾಕ್ಕಾಗಬೇಡಿ. ನಾನು ಎಂಬತ್ತರ ದಶಕದಲ್ಲಿ ಬಾನುಲಿಗೆ ಸೇರಿಕೊಂಡಿದ್ದಾಗ ಯಾರೋ ರಸ್ತೆಯಲ್ಲಿ, 'ಇಲ್ಲಿ ರೇಡಿಯೊ ಫ್ಯಾಕ್ಟರಿ ಎಲ್ಲಿ ಬರತ್ತಪ್ಪಾ?' ಎಂದು ಕೇಳಿದ್ದರು. ಪಾಪ ಉಳಿದ ಫ್ಯಾಕ್ಟರಿಗಳ ಹಾಗೆ ಇದೂ ಒಂದು ಎಂದು ಅವರು ತಿಳಿದಿದ್ದರೇನೋ. ಒಂದು ರೀತಿಯಲ್ಲಿ ಅವರ ಮಾತೂ ಸರಿಯೇ. ನಮ್ಮಲ್ಲಿ ನಿರಂತರ ಕಾರ್ಯಕ್ರಮಗಳ ಉತ್ಪಾದನೆಯಾಗುತ್ತದೆ. ನಾವು ಸಣ್ಣವರು ಕಾರ್ಯಕ್ರಮ ನಿರ್ಮಾಪಕರಾದರೆ ವಿಶ್ವೇಶ್ವರಯ್ಯನವರು ದೊಡ್ಡವರು ನವ ಕರ್ನಾಟಕದ ನಿರ್ಮಾಪಕರಾದರು. ಒಟ್ಟಿನಲ್ಲಿ ನಾವೆಲ್ಲ ನಿರ್ಮಾಪಕರೆ! ಸಾಲದೆಂಬಂತೆ ನಾವು ಚಿತ್ರಗೀತೆಗಳ ಪರ್ಮನೆಂಟ್ ಡಿಸ್ಟ್ರಿಬ್ಯೂಟರ್‌ಗಳು. ಮುಕ್ಕೋಟಿ ಕನ್ನಡಿಗರಿಂದ ಹಿಡಿದು ಸಪ್ತ ಕೋಟಿ ಕನ್ನಡಿಗರವರೆಗೆ ಕಾಲಾನುಕಾಲಕ್ಕೆ ಚಿತ್ರಗೀತೆಗಳ ಮೂಲಕ ಅವರ ಮನಸ್ಸು ಭಾವನೆ ಅಭಿರುಚಿಗಳನ್ನು ಒಂದು ಹದದಲ್ಲಿ ಕಾಪಾಡಿಕೊಂಡು ಬಂದವರು. ಹಾಗಾಗಿಯೇ ನಮ್ಮಲ್ಲಿ ಮನೋವೈದ್ಯರ ಸಂಖ್ಯೆ ಕಡಿಮೆಯಿರುವುದು !

ಇರಲಿ. ನಾನು ಅದರ ಫಲಾನುಭವಿ. ನಾವೆಲ್ಲ ಚಿತ್ರಗೀತೆ ಕೇಳುತ್ತಲೇ ಬೆಳೆದವರು ಅಲ್ಲವೇ? ಅದೃಷ್ಟವಶಾತ್ ನಮ್ಮ ಮನೆಯಲ್ಲಿ ರೇಡಿಯೊ ಒಂದಿತ್ತು. ನಮ್ಮ ಹಳ್ಳಿಯಲ್ಲಿ ರೇಡಿಯೊ ಇಟ್ಟುಕೊಂಡವರೇ ಆರೇಳು ಮಂದಿ. ಅದರಲ್ಲಿ ನಾವೂ ಒಬ್ಬರು. ಅದು ಇರುವುದೇ ಚಿತ್ರಗೀತೆ ಕೇಳುವುದಕ್ಕಾಗಿ ಎಂಬುದು ನನ್ನ ಅಕ್ಕ, ತಂಗಿ, ಓರಗೆಯ ಬಂಧು ಬಾಂಧವರು, ಗೆಳೆಯ ಗೆಳತಿಯರ ತಿಳಿವಳಿಕೆಯಾಗಿತ್ತು. ಆಗೆಲ್ಲ ಈಗಿನಂತೆ ಊರೂರಲ್ಲಿಯೂ ಟವರುಗಳು ಇರಲಿಲ್ಲವಾಗಿ ದೂರದ ಸ್ಟೇಷನ್‌ಗಳೂ ಸ್ವಲ್ಪ ಹೆಚ್ಚು ಕಡಿಮೆ ಸಿಗುತ್ತಿದ್ದವು. 'ಹೆಚ್ಚು ಕಡಿಮೆ' ಯಾಕೆಂದರೆ ಮೀಡಿಯಂ ವೇವ್ ತರಂಗಾಂತರಗಳಲ್ಲಿ ಚರಪರ ಸದ್ದಿನ ಜೊತೆ ಸ್ವಲ್ಪ ಹಿಂದೆ ಹೋದಂತೆಯೂ, ಸ್ವಲ್ಪ ಮುಂದೆ ಬಂದಂತೆಯೂ ದೂರದ ಸ್ಟೇಷನ್‌ಗಳು ಕೇಳುತ್ತಿದ್ದರೆ ನಮಗೇನೂ